ಗಿರೀಶ್ ಕಾರ್ನಾಡರ ನಾಗಮಂಡಲ ನಾಟಕದಲ್ಲಿ ಸ್ತ್ರೀ ಸಂವೇದನೆ

ದೀಪ ಕೆ.ಎನ್.*

DOI: https://doi.org/10.5281/zenodo.24338475

ABSTRACT

ಕನ್ನಡದ ಪ್ರಮುಖ ನಾಟಕಕಾರರಾದ ಗಿರೀಶ್ ಕಾರ್ನಾಡರು ಭಾರತೀಯ ಪುರಾಣ, ಜನಪದ ಕಥೆ, ಐತಿಹ್ಯ ಮತ್ತು ಸಮಕಾಲೀನ ಸಾಮಾಜಿಕ ವಾಸ್ತವಗಳನ್ನು ತಮ್ಮ ನಾಟಕಗಳಲ್ಲಿ ಸೃಜನಾತ್ಮಕವಾಗಿ ಬಳಸಿಕೊಂಡಿದ್ದಾರೆ. ಅವರ ಪ್ರಮುಖ ನಾಟಕಗಳಲ್ಲಿ 'ನಾಗಮಂಡಲ'ವೂ ಒಂದು. ಜನಪದ ಕಥೆಯನ್ನು ಆಧಾರವಾಗಿಸಿಕೊಂಡಿರುವ ಈ ನಾಟಕವನ್ನು ದಾಂಪತ್ಯ, ಹೆಣ್ಣಿನ ಅಸ್ತಿತ್ವ, ಪುರುಷ ಪ್ರಧಾನ ಸಮಾಜ, ಪ್ರೀತಿ, ಕಾಮ, ನಂಬಿಕೆ ಮತ್ತು ಸಾಮಾಜಿಕ ನೀತಿನಿಯಮಗಳ ಕುರಿತು ಸಂಶೋಧನಾ ದೃಷ ್ಟಿಯಿಂದ ಈ ಲೇಖನ ಅಧ್ಯಯನ ಮಾಡುತ್ತದೆ.

KEYWORDS: ಗಿರೀಶ್ ಕಾರ್ನಾಡ್, ನಾಗಮಂಡಲ, ಜನಪದ ಕಥೆ, ರಾಣಿ, ಅಪ್ಪಣ್ಣ, ನಾಗ, ಸ್ತ್ರೀ ಅಸ್ತಿತ್ವ, ಪುರುಷ ಪ್ರಧಾನ ಸಮಾಜ.

* **ದೀಪ ಕೆ.ಎನ್.,** ಸಂಶೋಧನಾರ್ಥಿ, ಕನ್ನಡ ವಿಭಾಗ, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ಗಿರೀಶ್ ಕಾರ್ನಾಡರ 'ನಾಗಮಂಡಲ' ನಾಟಕವು ಜಾನಪದ ಕಥೆಯೊಂದರ ಚೌಕಟ್ಟಿನಲ್ಲಿ ಸ್ತ್ರೀ ಸಂವೇದನೆ, ಶೋಷಣೆ, ಲೈಂಗಿಕತೆ, ಪ್ರೇಮ ಹಾಗೂ ಸ್ತ್ರೀ ಶಕ್ತಿಯ ಜಾಗೃತಿಯನ್ನು ಪ್ರತಿಪಾದಿಸುತ್ತದೆ. ಈ ನಾಟಕದಲ್ಲಿ ಸ್ತ್ರೀ ಪಾತ್ರಗಳು ಪುರುಷಪ್ರಧಾನ ವ್ಯವಸ್ಥೆಯ ದಬ್ಬಾಳಿಕೆಯನ್ನು ಎದುರಿಸುವ ಹಾಗೂ ಹೆಣ್ಣಿನ ಆಂತರಿಕ ಪ್ರಪಂಚವನ್ನು ಅನಾವರಣಗೊಳಿಸುವ ಧ್ವನಿಯಾಗಿ ಕಾಣಿಸಿಕೊಳ್ಳುತ್ತವೆ. ನಾಟಕವು ಸ್ತ್ರೀ ಸಂವೇದನೆ, ಆಕೆಯ ಅಂತರಂಗದ ಹಂಬಲಗಳು, ಪಿತೃಪ್ರಧಾನ ವ್ಯವಸ್ಥೆಯಲ್ಲಿ ನಡೆಯುವ ಶೋಷಣೆ ಹಾಗೂ ಕೊನೆಗೆ ಆಕೆ ಕಂಡುಕೊಳ್ಳುವ ಆಂತರಿಕ ವಿಮುಕ್ತಿಯನ್ನು ಚಿತ್ರಿಸುವ ಜಾನಪದ ಆಧರಿತ ನಾಟಕವಾಗಿದೆ. ಕಾರ್ನಾಡರು ರಾಣಿ ಹಾಗೂ ಕುರುಡವ್ವ ಎಂಬ ಇಬ್ಬರು ವಿಭಿನ್ನ ಸ್ತ್ರೀ ಪಾತ್ರಗಳ ಮೂಲಕ ಸ್ತ್ರೀ ಸಂವೇದನೆಯನ್ನು ಕಟ್ಟಿಕೊಟ್ಟಿದ್ದಾರೆ.

ಸಿದ್ಧಾಂತಪರ ಹಿನ್ನೆಲೆ:

ಗಿರೀಶ್ ಕಾರ್ನಾಡರ 'ನಾಗಮಂಡಲ' ನಾಟಕದ ಅಧ್ಯಯನಕ್ಕೆ ಬಳಸಬಹುದಾದ ಮೂರು ಪ್ರಮುಖ ದೃಷ್ಟಿಕೋನಗಳು:

1. ಸ್ತ್ರೀವಾದಿ ದೃಷ್ಟಿಕೋನ: ರಾಣಿಯ ಪಾತ್ರ, ಹೆಣ್ಣಿನ ಅಸ್ತಿತ್ವ, ಸ್ವಾತಂತ್ರ್ಯ, ದಾಂಪತ್ಯದಲ್ಲಿನ ಅಸಮಾನತೆ ಮತ್ತು ಪುರುಷ ಪ್ರಧಾನ ಸಮಾಜವನ್ನು ವಿಶ್ಲೇಷಿಸಬಹುದು.

2. ಜನಪದ ದೃಷ್ಟಿಕೋನ: ನಾಗಾರಾಧನೆ, ಜನಪದ ನಂಬಿಕೆಗಳು, ಮಾಂತ್ರಿಕತೆ, ಕಥೆ ಹೇಳುವ ಪರಂಪರೆ ಮತ್ತು ಜನಪದ ಸಂಸ್ಕೃತಿಯ ಅಂಶಗಳನ್ನು ಅಧ್ಯಯನ ಮಾಡಬಹುದು.

3. ಮನೋವೈಜ್ಞಾನಿಕ ದೃಷ್ಟಿಕೋನ: ರಾಣಿಯ ಏಕಾಂತ, ಪ್ರೀತಿ ಮತ್ತು ಆತ್ಮೀಯತೆಯ ಬಯಕೆ, ನಾಗನೊಂದಿಗೆ ಹೊಂದಿಕೊಳ್ಳುವ ಸಂಬಂಧ ಹಾಗೂ ಮಾನವೀಯ ಆಸೆ–ಆಕಾಂಕ್ಷೆಗಳನ್ನು ವಿಶ್ಲೇಷಿಸಬಹುದು.

ನಾಗಮಂಡಲ ನಾಟಕದಲ್ಲಿ ಸ್ತ್ರೀ ಸಂವೇದನೆ ನೆಲೆಗಳ ವಿಶ್ಲೇಷಣೆ:

ರಾಣಿ ಅಪ್ಪಣ್ಣನನ್ನು ಮದುವೆಯಾಗಿ ಅವನ ಮನೆ ಸೇರಿದವಳು. ಅಪ್ಪಣ್ಣ ತನ್ನ ವಿವಾಹ ಪೂರ್ವ ಸಂಬಂಧಗಳಿಂದಾಗಿ ರಾಣಿಯ ಮೇಲೆ ಆಸಕ್ತನಾಗಲಿಲ್ಲ. ಹಗಲಲ್ಲಿ ಬಂದು ಊಟ ಮಾಡಿ ಹೊರಟು ಹೋದರೆ ಪುನಃ ಬರುವುದು ಮಾರನೆ ದಿನವೆ, ಹೋಗುವಾಗ ಮನೆಗೆ ಬೀಗ ಹಾಕಿ, ಇಡೀ ದಿನ ರಾಣಿ ಏಕಾಂಗಿಯಾಗಿ ಕೊರಗುವಂತೆ ಮಾಡುತ್ತಾನೆ. ಮದುವೆಯಾಗಿ ಗಂಡ ಅಪ್ಪಣ್ಣನ ಮನೆಗೆ ಬರುವ ರಾಣಿಗೆ ಸಿಗುವುದು ಪ್ರೀತಿಯಲ್ಲ, ಬದಲಿಗೆ ಸಾಲು ಸಾಲು ನಿರಾಶೆಗಳು. ಆಕೆ ಸಂಪೂರ್ಣವಾಗಿ ಹೊರಜಗತ್ತಿನಿಂದ ವಂಚಿತಳಾಗುತ್ತಾಳೆ. ಅಪರಿಚಿತ ವಾತಾವರಣದಲ್ಲಿ ತನ್ನ ಭಾವನೆಗಳನ್ನು ಹಂಚಿಕೊಳ್ಳಲು ಯಾರೂ ಇಲ್ಲದೆ, ಕೇವಲ ಗಂಡನ ಬರುವಿಕೆಗಾಗಿ ಕಾಯುವ ರಾಣಿ ಪಿತೃಪ್ರಧಾನ ಸಮಾಜದಲ್ಲಿನ ಭಾರತೀಯ ಸಾಂಪ್ರದಾಯಿಕ ಹೆಣ್ಣಿನ ಏಕಾಂಗಿತನದ ಸಂಕೇತ. ಇಲ್ಲಿ ರಾಣಿಯ ಬಂಧನವು ಕೇವಲ ಭೌತಿಕವಾದುದಲ್ಲ,

ಬದಲಿಗೆ ಹೆಣ್ಣಿನ ಆಸೆ, ಕನಸು ಮತ್ತು ಸ್ವಾತಂತ್ರ್ಯವನ್ನು ಹತೋಟಿಯಲ್ಲಿಡುವ ಸಮಾಜದ ಸಂಕೇತವಾಗಿದೆ. ರಾಣಿಗೆ ಕೇವಲ ದೈಹಿಕ ಅಗತ್ಯಗಳಷ್ಟೇ ಅಲ್ಲ, ಗೌರವ, ಮಾನಸಿಕ ಬೆಂಬಲ ಮತ್ತು ನಿಜವಾದ ಪ್ರೀತಿಯ ಹಸಿವಿರುತ್ತದೆ. ಕುರುಡವ್ವ ವಯಸ್ಸಾದ ಕಣ್ಣು ಕಾಣದ ಅಜ್ಜಿಯಾಗಿದ್ದರೂ ರಾಣಿಯ ಕಷ್ಟವನ್ನು ಕಂಡು ಸ್ಪಂದಿಸುವ ಆಕೆಯ ತಾಯ್ತನದ ಗುಣ ಹಾಗೂ ಸ್ತ್ರೀಪರ ಕಾಳಜಿಯನ್ನು ಕಾಣಬಹುದು. ರಾಣಿಗೆ ಬಿಡುಗಡೆಯ ದಾರಿ ಕಾಣುವುದು ಕುರುಡವ್ವನ ಮೂಲಕ. ಹೆಣ್ಣಿನ ಆಳವಾದ ಆಕಾಂಕ್ಷೆಯನ್ನೂ, ಗಂಡಿನ ಚಂಚಲತೆಯನ್ನೂ ಅರಿತಿರುವ ಆಕೆಗೆ ಮಾತ್ರ ರಾಣಿಯ ವೇದನೆ ಅರ್ಥವಾಗುತ್ತದೆ. ''ಕಣ್ಣಿದ್ದರೂ ಗಂಡನ ಕಣ್ಣಿಗೆ ಕಾಣದಿದ್ದ ರಾಣಿಯ ವ್ಯಥೆ ಕುರುಡವ್ವಳಿಗೆ ಕಾಣಿಸುತ್ತದೆ.'' ಆಕೆ ನೀಡಿದ ಬೇರಿನ ಗಂಧವನ್ನು ನೀರಿನಲ್ಲಿ ಬೆರೆಸಿ, ಗಂಡನಿಗೆ ಕುಡಿಸಲು ಧೈರ್ಯ ಸಾಲದೆ ಹುತ್ತದಲ್ಲಿ ಸುರಿಯುತ್ತಾಳೆ. ಆ ಹುತ್ತದಲ್ಲಿದ್ದ ಹಾವೊಂದು ಅದನ್ನು ಕುಡಿದು ರಾಣಿಯನ್ನು ಮೋಹಿಸುತ್ತದೆ, ಪ್ರತಿರಾತ್ರಿ ಅಪ್ಪಣ್ಣನ ವೇಷದಲ್ಲಿ ಬಂದು ರಾಣಿಯನ್ನು ಕೂಡುತ್ತದೆ. ಅಪ್ಪಣ್ಣ ನೀಡದ ಪ್ರೀತಿ ಹಾಗೂ ಆದರವನ್ನು ನಾಗ ಅಪ್ಪಣ್ಣನಾಗಿ ಬಂದು ನೀಡುತ್ತಾನೆ. ರಾಣಿ ತನ್ನ ಪತಿಯಿಂದ ಬಯಸುವ ಗೌರವ ಮತ್ತು ಪ್ರೀತಿಯನ್ನು ನಾಗನ ಪಾತ್ರ ಪೂರೈಸುತ್ತದೆ. ರಾಣಿಗೆ ಇದು ಗೊಂದಲ ತಂದರೂ, ಆಕೆ ಮೊದಲ ಬಾರಿಗೆ ಪ್ರೀತಿ, ಆಕರ್ಷಣೆ ಹಾಗೂ ಸ್ತ್ರೀತ್ವದ ಸಂತಸವನ್ನು ಅನುಭವಿಸುತ್ತಾಳೆ. ಇಲ್ಲಿ ಹೆಣ್ಣಿನ ಲೈಂಗಿಕ ಆಕಾಂಕ್ಷೆ ಮತ್ತು ಭಾವನಾತ್ಮಕ ಅಗತ್ಯಗಳನ್ನು ಕಾರ್ನಾಡರು ಸ್ವಭಾವಜನ್ಯವಾಗಿ ಚಿತ್ರಿಸಿದ್ದಾರೆ. ಹಗಲಿನಲ್ಲಿ ಬರುವ ಅಪ್ಪಣ್ಣ ಒರಟಾಗಿ ವರ್ತಿಸಿದರೆ ರಾತ್ರಿ ಬರುವ ಅಪ್ಪಣ್ಣ ಮೃದುವಾಗಿ ವರ್ತಿಸುತ್ತಾನೆ. ಈ ರೀತಿಯ ವರ್ತನೆಗೆ ಇರುವ ಇನ್ನೊಂದು ಆಯಾಮವನ್ನು ಗುರುತಿಸಲಾಗಿದೆ. ಈ ಕಥೆ ಬೆಳೆದುಬಂದ ಸಾಮಾಜಿಕ ಸಂದರ್ಭದಲ್ಲಿ ಅವಿಭಕ್ತ ಕುಟುಂಬಗಳಿದ್ದವು. ಅಲ್ಲಿ ಗಂಡನಾದವನು ಹೀಗೆ ಇಬ್ಬಗೆಯಾಗಿ ವರ್ತಿಸುತ್ತಿದ್ದ; ರಾತ್ರಿ ಪ್ರಿಯಕರನಂತೆ ಹಗಲು ಒರಟು ವ್ಯಕ್ತಿಯಂತೆ ವರ್ತಿಸುತ್ತಿದ್ದ ಗಂಡನ ಈ ನಡವಳಿಕೆಗಳನ್ನು ಹೆಂಡತಿಯಾದವಳು ಅನುಭವಿಸಬೇಕಾಗಿತ್ತು ಎಂಬುದನ್ನು ರಾಣಿಯ ಪಾತ್ರ ಸೂಚಿಸುತ್ತದೆ. ರಾಣಿಗೆ ಅಪ್ಪಣ್ಣ – ನಾಗಪ್ಪರ ಸಂಬಂಧದ ವ್ಯತ್ಯಾಸ ಅನೇಕ ಬಾರಿ ಗೊತ್ತಾಗುತ್ತದೆ. ''ರಾತ್ರಿ ಬಂದಾಗ ಚೆಂದಾಗಿ ಮಾತಾಡಿಸ್ತೀರಿ. ಹಗಲು ಮಾತ್ರ ನಾನು ಬಾಯಿ ತೆಗೆಯೋದೆ ತಡ ಬುಸ್ ಬುಸ್ಸ್ ಅಂತ ಹರಿಹಾಯ್ತೀರಿ'' ಎಂದು ಗುರುತಿಸುತ್ತಾಳೆ. ಹೀಗಿದ್ದರೂ ಅವರ ಸಂಬಂಧ ಮುಂದುವರಿಯುತ್ತದೆ. ರಾಣಿ ಗರ್ಭಿಣಿಯಾಗುತ್ತಾಳೆ. ಅಪ್ಪಣ್ಣ ಆಕೆಯ ಶೀಲವನ್ನು ಶಂಕಿಸುತ್ತಾನೆ. ತಾನು ಆಕೆಯನ್ನು ಮುಟ್ಟೇ ಇಲ್ಲವಾದ್ದರಿಂದ ಆಕೆ ಅಕ್ರಮ ಸಂಬಂಧ ಹೊಂದಿದ್ದಾಳೆಂದು ಆರೋಪಿಸುತ್ತಾನೆ. ಆಗ ಅವಳು ಅಪ್ಪಣ್ಣನ ಆದಿಯಾಗಿ ಊರವರೆಲ್ಲರ ಅನುಮಾನಗಳಿಗೆ ಕಾರಣವಾಗುತ್ತಾಳೆ. ಅಪ್ಪಣ್ಣ ಪರಸ್ತ್ರೀ ಮನೆಗೆ ಹೋದರೂ ಸಮಾಜ ಆತನನ್ನು ಯಾವುದೇ ಪ್ರಶ್ನೆ ಮಾಡುವುದಿಲ್ಲ. ಆದರೆ ರಾಣಿ ಗರ್ಭವತಿಯಾದಾಗ ಆಕೆ ಊರ ಜನರೆದುರು ನಾಗದಿವ್ಯವನ್ನು ಎದುರಿಸಬೇಕಾದ ಸಂದರ್ಭ ಬರುತ್ತದೆ. ಗಂಡಸಿಗೆ ಇಲ್ಲದ ''ಪಾತಿವ್ರತ್ಯದ ಪರೀಕ್ಷೆ'' ಹೆಣ್ಣಿಗೆ ಮಾತ್ರ ಏಕೆ? ಹೆಣ್ಣನ್ನು ತನ್ನ

ಹಿಡಿತದಲ್ಲಿಟ್ಟುಕೊಳ್ಳಲು ಬಯಸುವ ಪುರುಷ ಪ್ರಧಾನ ಸಮಾಜ ಲೈಂಗಿಕತೆಯನ್ನು ಪ್ರಮುಖ ಆಯುಧವಾಗಿ ಬಳಸಿರುವುದನ್ನು ಕಾಣಬಹುದು. ಇದು ಸಮಾಜವು ಹೆಣ್ಣಿನ ಶೀಲಕ್ಕೆ ಮಾತ್ರ ಒತ್ತು ನೀಡಿ, ಗಂಡಿನ ನಡತೆಯನ್ನು ನಿರ್ಲಕ್ಷಿಸುವ ದ್ವಿಮುಖ ನೀತಿಯನ್ನು ಬಿಂಬಿಸುತ್ತದೆ. ಸಮಾಜವು ಹೆಣ್ಣಿನ ಲೈಂಗಿಕತೆಯನ್ನು ಕೇವಲ ಸಂತಾನೋತ್ಪತ್ತಿಗೆ ಸೀಮಿತಗೊಳಿಸುತ್ತದೆ. ಆದರೆ ಕಾರ್ನಾಡರು ರಾಣಿಯ ಮೂಲಕ ಹೆಣ್ಣಿಗೂ ಶಾರೀರಿಕ ಮತ್ತು ಭಾವನಾತ್ಮಕ ತೃಪ್ತಿಯ ಹಕ್ಕಿದೆ ಎಂಬುದನ್ನು ಪ್ರತಿಪಾದಿಸುತ್ತಾರೆ. ಸರ್ಪ ಪರೀಕ್ಷೆಯಲ್ಲಿ ರಾಣಿ "ನಾನು ನನ್ನ ಗಂಡ ಮತ್ತು ಈ ಕಾಡಿನ ನಾಗನನ್ನು ಬಿಟ್ಟು ಬೇರಾವ ಪುರುಷನನ್ನೂ ಮುಟ್ಟಿಲ್ಲ" ಎಂದು ಪ್ರಮಾಣ ಮಾಡುತ್ತಾಳೆ. ಇದು ಅನುಭವದ ನೆಲೆಯಲ್ಲಿ ಸಂಪೂರ್ಣ ಸತ್ಯವಾಗಿತ್ತು. ನಾಗರಹಾವು ಆಕೆಗೆ ಹಾನಿ ಮಾಡದೆ ಆಕೆಯ ತಲೆಯ ಮೇಲೆ ಹೆಡೆಬಿಚ್ಚಿ ಆಶೀರ್ವದಿಸುತ್ತದೆ. ಇದರ ಪರಿಣಾಮವಾಗಿ ಸಮಾಜ ಆಕೆಯನ್ನು 'ದೇವತೆ' ಎಂದು ಕೊಂಡಾಡುತ್ತದೆ. ಹಿರಿಯರು "ನೀನು ಸಾಮಾನ್ಯ ಹೆಣ್ಣಲ್ಲ. ದೇವತೆ!" ಎನ್ನುತ್ತ ಪಲ್ಲಕ್ಕಿಯಲ್ಲಿ ಕರೆದೊಯ್ಯುತ್ತಾರೆ, ಅಪ್ಪಣ್ಣನೂ ಅವಳ ಕಾಲಿಗೆರಗುತ್ತಾನೆ. ರಾಣಿ ರಾಣಿಯಾಗಿಯೇ ಸ್ವೀಕರಿಸಲ್ಪಡದೆ ದೇವತೆಯಾಗಿ ಗೌರವಿಸಲ್ಪಡುತ್ತಾಳೆ. ಆಕೆ ಸಮಾಜ ತನ್ನ ಮೇಲೆ ಹೇರಿದ ಪರೀಕ್ಷೆಯನ್ನೇ ತನ್ನ ಶಕ್ತಿಯನ್ನಾಗಿ ಮಾಡಿಕೊಂಡು, ತನಗೆ ನಿರಂತರ ಶೋಷಣೆ ನೀಡಿದ ಅಪ್ಪಣ್ಣನನ್ನು ತನ್ನ ಕಾಲಡಿಯಲ್ಲಿ ಬಾಗುವಂತೆ ಮಾಡುತ್ತಾಳೆ. ಇದು ಹೆಣ್ಣು ತನ್ನ ಆಂತರಿಕ ಶಕ್ತಿಯಿಂದ ಪುರುಷಾಹಂಕಾರವನ್ನು ಮಂಡಿಯೂರುವಂತೆ ಮಾಡಬಹುದು ಎಂಬುದರ ಸಂಕೇತವಾಗಿದೆ.

ಕಾರ್ನಾಡರು ಪ್ರೀತಿರಹಿತ ವಿವಾಹಗಳಲ್ಲಿ ಸಿಲುಕಿರುವ ಮಹಿಳೆಯರ ಹೋರಾಟಗಳನ್ನು ಚಿತ್ರಿಸುವುದಲ್ಲದೆ, ಅವರ ಮೌನ, ಸಹಿಷ್ಣುತೆ ಮತ್ತು ಆಂತರಿಕ ಶಕ್ತಿಯನ್ನು ಎತ್ತಿ ತೋರಿಸಿದ್ದಾರೆ. ನಾಟಕವು ಕಠಿಣ ನೈತಿಕ ಮೌಲ್ಯಗಳು ಮತ್ತು ಸಾಮಾಜಿಕ ರೂಢಿಗಳ ಬೂಟಾಟಿಕೆಯನ್ನು ಪ್ರಶ್ನಿಸುತ್ತದೆ. ರಾಣಿ ಕೇವಲ ಒಬ್ಬ ವ್ಯಕ್ತಿಯಾಗಿರದೆ ಪುರುಷನ ದರ್ಪ ಹಾಗೂ ದಬ್ಬಾಳಿಕೆಗೆ ಒಳಗಾದ ಎಲ್ಲ ಸ್ತ್ರೀಯರ ಪ್ರತಿನಿಧಿಯಾಗುತ್ತಾಳೆ, ಇಡೀ ನಾಟಕವೇ ಸ್ತ್ರೀ ಕೇಂದ್ರಿತವಾಗಿದೆ. ರಾಣಿ ಮತ್ತು ನಾಗನ ಸಂಬಂಧವು ಕೇವಲ ಒಲವಿನ ಕಥೆಯಲ್ಲ; ಅದು ಪಿತೃಪ್ರಧಾನ ವ್ಯವಸ್ಥೆಯ ಬಂಧನದಲ್ಲಿದ್ದ ಹೆಣ್ಣೊಬ್ಬಳು ತನ್ನ ಆಸೆ, ಭಾವನೆ ಮತ್ತು ಲೈಂಗಿಕತೆಯನ್ನು ಸಾಂಕೇತಿಕವಾಗಿ ಕಂಡುಕೊಳ್ಳುವ 'ಸ್ತ್ರೀ ವಿಮೋಚನೆಯ' ಕಥೆಯಾಗಿದೆ ಎಂಬುದನ್ನು ಕಾರ್ನಾಡರು ಪ್ರತಿಪಾದಿಸಿದ್ದಾರೆ.

ಉಪಸಂಹಾರ:

ಗಿರೀಶ್ ಕಾರ್ನಾಡರ 'ನಾಗಮಂಡಲ' ನಾಟಕವು ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಟ್ಟಿನ ಹಾಗೂ ಸ್ತ್ರೀತ್ವದ ಸಂಕೀರ್ಣ ಆಯಾಮಗಳನ್ನು ಅನಾವರಣಗೊಳಿಸುವ ಅತ್ಯಂತ ಪ್ರಮುಖ ಕೃತಿಯಾಗಿದೆ. ಜಾನಪದ ಕಥೆಯೊಂದನ್ನು ಆಧಾರವಾಗಿಟ್ಟುಕೊಂಡು ಬರೆದ ಈ ನಾಟಕದಲ್ಲಿ, 'ರಾಣಿ' ಎಂಬ ಕೇಂದ್ರ ಪಾತ್ರದ

ಮೂಲಕ ಹೆಣ್ಣಿನ ಭಾವನಾತ್ಮಕ ಜಗತ್ತು, ಶೋಷಣೆ, ಲೈಂಗಿಕತೆ, ಒಂಟಿತನ ಮತ್ತು ಅಸ್ತಿತ್ವದ ಹೋರಾಟವನ್ನು ಚಿತ್ರಿಸಲಾಗಿದೆ. ಗಿರೀಶ್ ಕಾರ್ನಾಡರು ರಾಣಿಯ ಪಾತ್ರದ ಮೂಲಕ ಒಬ್ಬ ಹೆಣ್ಣು ಸಮಾಜದ ನಿಂದನೆ, ಏಕಾಂಗಿತನ ಮತ್ತು ಶೋಷಣೆಗಳನ್ನು ಮೆಟ್ಟಿ ನಿಂತು, ತನ್ನ ಅಂತರಂಗದ ಶಕ್ತಿಯ ಮೂಲಕ ಹೇಗೆ ದೇವತೆಯ ಸ್ಥಾನಕ್ಕೇರುತ್ತಾಳೆ ಎಂಬುದನ್ನು ಜಾನಪದೀಯ ಸಾಂಕೇತಿಕತೆಯೊಂದಿಗೆ ಕಟ್ಟಿಕೊಟ್ಟಿದ್ದಾರೆ. ನಾಗಮಂಡಲದಲ್ಲಿ 'ಸ್ತ್ರೀ' ಎಂದರೆ ಕೇವಲ ಅಸಹಾಯಕಳಾಗಿ ಕಣ್ಣೀರಿಡುವವಳಲ್ಲ; ಆಕೆ ಕಾಲಕ್ರಮೇಣ ತನ್ನ ಅಸ್ತಿತ್ವವನ್ನು ಕಂಡುಕೊಂಡು, ಸಾಂಪ್ರದಾಯಿಕ ಸಮಾಜವನ್ನು ತನ್ನ ಅಧೀನಕ್ಕೊಳಪಡಿಸಿಕೊಳ್ಳುವ ಶಕ್ತಿಯಾಗಿ ಬಿಂಬಿಸಿರುವುದನ್ನು ಕಾಣಬಹುದಾಗಿದೆ.

ಪರಾಮರ್ಶನ ಗ್ರಂಥಗಳು:

1. ಆಮೂರ ಜಿ. ಎಸ್., (2012), ಗಿರೀಶ್ ಕಾರ್ನಾಡ್ ಹಾಗೂ ಭಾರತೀಯರ ರಂಗಭೂಮಿ, ಧಾರವಾಡ: ಮನೋಹರ ಗ್ರಂಥ ಮಾಲೆ.
2. ಅನ್ನದಾನೇಶ್, (2012), ಗಿರೀಶ್ ಕಾರ್ನಾಡರ ನಾಟಕಗಳು: ಒಂದು ಅಧ್ಯಯನ, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.
3. ಕೃಷ್ಣಮೂರ್ತಿ ಚಂದರ್, (2007), ಗಿರೀಶ್ ಕಾರ್ನಾಡ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
4. ಸತ್ಯನಾರಾಯಣ ಹೆಚ್. ಎಸ್., (2013), ಗಿರೀಶ್ ಕಾರ್ನಾಡ್, ನವದೆಹಲಿ: ಸಾಹಿತ್ಯ ಅಕಾಡೆಮಿ.
5. ಮರುಳ ಸಿದ್ದಪ್ಪ ಕೆ., ಕೃಷ್ಣಮೂರ್ತಿ ಹನೂರು, (2010), ಗಿರೀಶ್ ಕಾರ್ನಾಡರ ನಾಟಕಗಳು ಕನ್ನಡದ ಪ್ರತಿಕ್ರಿಯೆ, ಬೆಂಗಳೂರು: ಸಂವಹನ ಪ್ರಕಾಶನ.
6. ಗಿರೀಶ್ ಕಾರ್ನಾಡ್, (1990), ನಾಗಮಂಡಲ, ಧಾರವಾಡ: ಮನೋಹರ ಗ್ರಂಥ ಮಾಲಾ.